**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾಗಳ ನ್ಯಾಯಾಲಯ,**

**ಯಾದಗಿರಿ**

**ಸಿ.ಸಿ. ನಂ..433/2021**

**ಫಿರ್ಯಾದುದಾರರುಃ** ಶ್ರೀ ಮುಕೇಶ್ @ ಮುಕೇಶ್ ಕುಮಾರ್ ತಂದೆ ಮಹೇಶ್ಚಂದ್ರ,

**ವಿರುದ್ಧ**

**ಆಪಾದಿತಃ** ಶ್ರೀ ಶರಣಪ್ಪ ತಂದೆ ಅಯ್ಯಪ್ಪ,

**ಆಪಾದನೆ**

**ಶ್ರೀ ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honor) ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸುತ್ತಿದ್ದೇನೆ.**

ಪಿರ್ಯಾದಿದಾರರು ಮತ್ತು ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ ದಿನಾಂಕ **02.01.2021** ರಂದು ರೂ.**4,90,000/-** ಗಳನ್ನು ಸಾಲಪಡೆದಿದ್ದು, ಸದರಿ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆಪಾದಿತನಾದ ನೀನು ಖಾತೆ ಹೊಂದಿರುವ ಎಸ್.ಬಿ.ಹೆಚ್ ಬ್ಯಾಂಕ್, ಈಶ್ವರ್ ಕಾಂಪ್ಲೆಕ್ಸ್, ಯಾದಗಿರಿ ಶಾಖೆಗೆ ಸೇರಿದ **120524** ಸಂಖ್ಯೆಯ ಚೆಕ್ ನಲ್ಲಿ ರೂ. **4,90,000/-** ಹಾಗೂ ದಿನಾಂಕ **19.03.2021** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ. ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಎಸ್.ಬಿ.ಐ ಬ್ಯಾಂಕ್, ಯಾದಗಿರಿ ಶಾಖೆಯ ಮೂಲಕ ದಿನಾಂಕ **19.03.2021** ರಂದು ಹಾಜರು ಪಡಿಸಿದಾಗ**,** “Funds Insufficient” ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **19.03.2021** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **05.04.2021** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ **07.04.2024** ರಂದು ಜಾರಿಯಾಗಿರುತ್ತದೆ**.** ಆಪಾದಿತನಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ

ವರ್ಗಾವಣೀಯ ಲಿಖಿತ ಕಾಯ್ದೆ ಕಲಂ **138** ರ ರಿತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ- 1 : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು
ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-2 : ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ
ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ :

(ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.)

ದಿನಾಂಕಃ 23.06.2025.
ಸ್ಥಳಃ ಯಾದಗಿರ

ದಿವಾಣಿ ನ್ಯಾಯಾಧಿಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
**ಯಾದಗಿರಿ.**